ಮಿಸ್ಲೇನಿಯಸ್. ನಂಃ 19/2019
ಆರ್.ಡಬ್ಲ್ಯೂ-1 (ಬಸವರಾಜ)

ದಿನಾಂಕ: 27-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ. ಡಿ.ಬಿ.ಎ. ಅರ್ಜಿದಾರ ಪರ ವಕೀಲರಿಂದಃ</u>**

ಓ.ಎಸ್.ನಂ.207/2018 ರಲ್ಲಿ ರಾಜಿಯಾದ ನಂತರ ಶಿವನಗೌಡ ಗೂಳೆಪ್ಪ ಪಟ್ಟಣಶೆಟ್ಟಿ ಇವರು ದಿಃ 30/11/2018 ರಂದು ಸರ್ವೆ ನಂ.474 ರ 11-ಇ ನಕಾಶೆ ಮಾಡಲು ಅರ್ಜಿ ಕೊಟ್ಟಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರಪಡಿಸಿರುತ್ತೇನೆ. ನಿ.ಆರ್-1ರ ಅರ್ಜಿಯಲ್ಲಿ ಶಿವನಗೌಡ ಗೂಳೆಪ್ಪ ಪಟ್ಟಣಶೆಟ್ಟಿ ಇವರ ಸಹಿ ಇಲ್ಲದೇ ನಾವು ಮಾತ್ರ ಸಹಿ ಮಾಡಿ ಅರ್ಜಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿ.ಆರ್-1ರಲ್ಲಿ ಅರ್ಜಿದಾರರ ಸಹಿ ಎಂದು ಬರೆದಿದ್ದಲ್ಲಿ ಯಾವುದೇ ಸಹಿ ಇರುವುದಿಲ್ಲ.

2. ಓ.ಎಸ್.ನಂ.207/2018 ರಲ್ಲಿ ಶಿವನಗೌಡ ಗೂಳೆಪ್ಪ ಪಟ್ಟಣಶೆಟ್ಟಿ ಇವರ ಸಹೋದರಿಯರನ್ನು ಸೇರಿಸದೆ ಸದರಿ ದಾವೆಯನ್ನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿದಾರರು ಶಿವನಗೌಡ ಗೂಳೆಪ್ಪ ಪಟ್ಟಣಶೆಟ್ಟಿ ಇವರ ಸಹೋದರಿಯರು ಆಸ್ತಿಯಲ್ಲಿಯ ತಮ್ಮ ಹಕ್ಕು ಬಿಟ್ಟು ಕೊಟ್ಟಿದ್ದರು ಎಂದು ಹೇಳುತ್ತಾರೆ. ಈ ಪ್ರಸ್ತುತ ಅರ್ಜಿಯಲ್ಲಿ ಶಿವನಗೌಡ ಗೂಳೆಪ್ಪ ಪಟ್ಟಣಶೆಟ್ಟಿ ಇವರ ಸಹೋದರಿಯರು ಆಸ್ತಿಯಲ್ಲಿಯ ತಮ್ಮ ಹಕ್ಕು ಬಿಟ್ಟು ಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ.

3. ಓ.ಎಸ್.ನಂ.66/2004 ರಲ್ಲಿ ಆದ ರಾಜಿ ಡಿಕ್ರೀಯ ಪ್ರಕಾರ ಶಿವನಗೌಡ ಗೂಳೆಪ್ಪ ಪಟ್ಟಣಶೆಟ್ಟಿ ಇವರ ಸಹೋದರಿಯರು ಆಸ್ತಿಯಲ್ಲಿಯ ತಮ್ಮ ಹಕ್ಕು ಬಿಟ್ಟು ಕೊಟ್ಟಿದ್ದಾರೆ. ಈ ಅರ್ಜಿಯಲ್ಲಿ ಓ.ಎಸ್.ನಂ.66/2004 ರಲ್ಲಿ ರಾಜಿ ಡಿಕ್ರೀಯ ಪ್ರತಿಯನ್ನು ಹಾಜರ ಮಾಡಿಲ್ಲ.

4. ಓ.ಎಸ್.ನಂ.98/2019 ರಲ್ಲಿಯ ವಾದಿಯರು ಅಂದರೆ ಈ ಅರ್ಜಿಯ ಅರ್ಜಿದಾರರು ಗೂಳಪ್ಪ ದುಂಡಪ್ಪ ಪಟ್ಟಣಶೆಟ್ಟಿ ಇವರ ಆಸ್ತಿಯಲ್ಲಿಯ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಓ.ಎಸ್.ನಂ.66/2004 ರಲ್ಲಿ ಈ ಅರ್ಜಿಯ ಅರ್ಜಿದಾರರು ಪಕ್ಷಗಾರರಿದ್ದು ಅವರು ಸರ್ವೆ ನಂ.474 ರಲ್ಲಿ ತಮ್ಮ ಯಾವುದೇ ಹಕ್ಕು ಇರುವುದಿಲ್ಲ ಎಂದು ತಾಜಿ ಅರ್ಜಿಯಲ್ಲಿ ಹೇಳಿರುತ್ತಾರೆ. ಓ.ಎಸ್.ನಂ.66/2004 ರಲ್ಲಿ ಆದ ರಾಜಿ ಅರ್ಜಿಯನ್ನು ನಾನು ಹಾಜರ ಮಾಡಿಲ್ಲ.

5. ಓ.ಎಸ್.ನಂ.98/2019 ರಲ್ಲಿ ದಿಃ 28/08/2019 ರಂದು ಆದೇಶ ಆದಾಗ ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಸದರಿ ದಾವೆಯಲ್ಲಿ ನಮ್ಮ ವಕೀಲರಿಂದ ಹಾಜರಾಗಿದ್ದೇವು ಎಂದರೆ ಸಾಕ್ಷಿದಾರರು ಸದರಿ ದಾವೆಯಲ್ಲಿ ತಮ್ಮ ತಂದೆ ಮತ್ತು ತಮ್ಮ ಹಾಜರಾಗಿದ್ದರು ತಾವು 2023ರಲ್ಲಿ ಸದರಿ ದಾವೆಯಲ್ಲಿ ಹಾಜರಾಗಿದ್ದಾಗಿ ಹೇಳುತ್ತಾರೆ.

6. ನಿ.ಆರ್-2 ರಲ್ಲಿ ಶಿವನಗೌಡ ಗೂಳಪ್ಪ ಪಟ್ಟಣಶೆಟ್ಟಿ ಇವರ ಸಹಿ ಇರುವುದಿಲ್ಲ ಎಂದರೆ ಸರಿ. ನಿ.ಆರ್-2 ರಲ್ಲಿ ನನ್ನ ಮತ್ತು ಉಳಿದವರ ಸಹಿ ಇವೆ ಎಂದರೆ ಸರಿ. ಅದೇ ರೀತಿ ನಿ.ಆರ್-2 ರಲ್ಲಿ ಹಿತಾಸಕ್ತಿದಾರರ ಸಹಿ ಇರುವುದಿಲ್ಲ ಎಂದರೆ ಸರಿ.

7. ಓ.ಎಸ್.ನಂ.207/2018 ರಲ್ಲಿ ಒಟ್ಟು 07 ಸರ್ವೆ ನಂಬರಗಳಿದ್ದವು. ನಿ.ಆರ್-3 ರಲ್ಲಿ ಸರ್ವೆ ನಂ.65, 517 ಹಾಗೂ 474 ಮಾತ್ರ ತೋರಿಸಿದ್ದಾರೆ ಎಂದರೆ ಸರಿ. ಉಳಿದ ನಾಲ್ಕು ಜಮೀನುಗಳಿಗು ಸಹ ನೋಟಿಸು ಕೊಟ್ಟಿದ್ದಾರೆ ಎಂದು ತೋರಿಸಲು ದಾಖಲೆ ಹಾಜರ ಮಾಡಿಲ್ಲ.

8. ಅರ್ಜಿದಾರರಿಗೆ ನಷ್ಟ ಉಂಟು ಮಾಡುವ ಉದ್ದೇಶದಿಂದ ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ಸಹ ದಾವಾ ಆಸ್ತಿಗಳ ಉತಾರದಲ್ಲಿ ನಮ್ಮ ಹೆಸರು ಹಚ್ಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1ನೇ ಅರ್ಜಿದಾರರು ದಿಃ19/11/2019 ರಂದು ದಾವಾ ಆಸ್ತಿಯ ಜಮೀನುಗಳ ಕಂದಾಯ ದಾಖಲೆಗಳಲ್ಲಿ ಹೆಸರು ಬದಲಾವಣೆ ಮಾಡಬಾರದೆಂದು ಅರ್ಜಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿದಾರರು ದಾವಾ ಆಸ್ತಿಯ ಉತಾರದಲ್ಲಿ ತಮ್ಮ ಹೆಸರು ದಾಖಲಾದ ನಂತರ ಅರ್ಜಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

9. ನಿ.ಆರ್-12 ರಲ್ಲಿ ಕರ್ನಾಟಕ ನೀರಾವರಿ ನಿಗಮದ ಹೆಸರು 2022-23 ರಲ್ಲಿ ದಾಖಲಾಗಿದೆ. ಕರ್ನಾಟಕ ನೀರಾವರಿ ನಿಗಮದವರ ಹೆಸರು ದಾಖಲ

ಆಗುವುದಕ್ಕಿಂತ ಮೊದಲೆ ನಮ್ಮ ಹಸರು ದಾಖಲಾಗಿತ್ತು. ಅದೇ ರೀತಿ ಸಾಕ್ಷಿದಾರರು ಓ.ಎಸ್.ನಂ.98/2019 ರಲ್ಲಿ ದಿಃ 28/08/2019 ರಂದು ಅದ ಆದೇಶವನ್ನು ತೆರವುಗೊಳಿಸಿ ಕರ್ನಾಟಕ ನೀರಾವರಿ ನಿಗಮದವರು ಸರ್ವೆ ನಂ.474 ರ ಪಹಣಿ ಪತ್ರಿಕೆಯಲ್ಲಿ ತಮ್ಮ ಹೆಸರು 06ಗುಂಟೆ ಜಮೀನಿನ ಸ್ವಾಧೀನ ಪಡಿಸಿಕೊಂಡಿದ್ದಕ್ಕೆ ದಾಖಲಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ.

10. ಆರ್.ಎ.ನಂ.241/2019ರಲ್ಲಿ ಆದ ಆದೇಶವನ್ನು ನಾನು ಹಾಜರಪಡಿಸಿಲ್ಲ. ನಿ.ಆರ್-1ಕ್ಕೆ ಶಿವನಗೌಡ ಗೂಳಪ್ಪ ಪಟ್ಟಣಶೆಟ್ಟಿ ಇವರ ಸಹಿ ಇಲ್ಲದೇ ನಾವೇ ಅರ್ಜಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿ.ಆರ್-1ಕ್ಕೆ ನಾವೇ ಅರ್ಜಿ ಕೊಟ್ಟಿದ್ದರೂ ಸಹ ಶಿವನಗೌಡ ಗೂಳಪ್ಪ ಪಟ್ಟಣಶೆಟ್ಟಿ ಇವರು ಅರ್ಜಿ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಅರ್ಜಿದಾರರು ನನ್ನ ತಂದೆಯ ಅಕ್ಕ-ತಂಗಿಯರು ಎಂದರೆ ಸರಿ. ಈ ಅರ್ಜಿದಾರರು ಶಿವನಗೌಡ ಗೂಳಪ್ಪ ಪಟ್ಟಣಶೆಟ್ಟಿ ಇವರಿಗೂ ಸಹ ಸಂಬಂಧಿಕರಾಗಬೇಕು ಎಂದರೆ ಸರಿ. ಶಿವನಗೌಡ ಗೂಳಪ್ಪ ಪಟ್ಟಣಶೆಟ್ಟಿ ಇವರ ಮಾತು ಕೇಳಿ ಅರ್ಜಿದಾರರು ಈ ಸುಳ್ಳು ಅರ್ಜಿ ದಾಖಲಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ಸಹ ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರು ದಾಖಲಿಸುವುದನ್ನು ತಡೆ ಹಿಡಿಯುವ ಬದಲು

ಸರ್ವೆ ನಂ.474 ರ ಪಹಣಿ ಪತ್ರಿಕೆಯಲ್ಲಿ ನಮ್ಮ ಹೆಸರು ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ದಿನಾಂಕ 28/08/2019 ರಂದು ನ್ಯಾಯಾಲಯದಲ್ಲಿ ಆದೇಶ ಆಗುವುದಕ್ಕಿಂತ ಪೂರ್ವದಲ್ಲಿಯೆ ಅಂದರೆ ದಿಃ30/11/2018 ರಂದು ಶಿವನಗೌಡ ಗೂಳಪ್ಪ ಪಟ್ಟಣಶೆಟ್ಟಿ ಇವರು ನಿ.ಆರ್-1ರ ಪ್ರಕಾರ ಅರ್ಜಿ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಿ.ಆರ್-1ರ ಅರ್ಜಿಯ ಪ್ರಕಾರ ಮುಂದಿನ ಕ್ರಮ ಕಂದಾಯ ಅಧಿಕಾರಿಗಳು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ.

13. 4ನೇ ಎದುರುದಾರರಿಗೆ ಈಗ 21 ವರ್ಷ ವಯಸ್ಸು ಇರುತ್ತದೆ. ನಿ.ಆರ್-9 ಕೊಟ್ಟಾಗ 4ನೇ ಎದುರುದಾರರು ಇನ್ನು ಅಪ್ರಾಪ್ತ ವಯಸ್ಕರಿದ್ದರು ಎಂದರೆ ನನಗೆ ಗೊತ್ತಿಲ್ಲ. 4ನೇ ಎದುರುದಾರರ ಸಹಿಯನ್ನು ನಿ.ಆರ್-9ರಲ್ಲಿ ಸರ್ವೆ ಅಧಿಕಾರಿಗಳು ಸಹಿ ಮಾಡಿಸಿಕೊಂಡಿರುತ್ತಾರೆ. ಶಿವನಗೌಡ ಇವರೇ ನಿ.ಆರ್-1 ರಂತೆ ಅರ್ಜಿ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ